O.S. 244/2016
P.W.1

**ಸಾಕ್ಷಿಯನ್ನು ದಿನಾಂಕಃ 27-06-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು 2 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ. ಟಿ ಆರ್ ಎ ವಕೀಲರವರಿಂದಃ**

ದಾವಾ ಆಸ್ತಿಗಳನ್ನು ಹೊರತುಪಡಿಸಿ ನನ್ನ ಗಂಡನ ಹೆಸರಿನಲ್ಲಿ ಬೇರೆ ಆಸ್ತಿಗಳು ಕೂಡ ಇವೆ ಎಂದರೆ ಸರಿಯಲ್ಲ. ಕಡಬಗೇರಿ ಗ್ರಾಮದಲ್ಲಿ ಸರ್ವೇ ನಂ. 70 ಸಿ ಇದ್ದು ನನ್ನ ಗಂಡನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಅದರಲ್ಲಿ ಮೈನರ್ ಗಾರ್ಡಿನ್ ಎಂದು ಉಲ್ಲೇಖ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರ್ವೇ ನಂಬರ್ 12/ಸಿ ಮತ್ತು 359/ಸಿ ಇವು ನನ್ನ ಗಂಡನ ಹೆಸರಿನಲ್ಲಿ ಇವೆ ಎಂದು ನುಡಿದರರು. ನಮ್ಮ ಕುಟುಂಬಕ್ಕೆ ಸೇರಿದ 15 ಸೆಂಟ್ಸ್ ಕಣ ಕಡಬಗೇರಿ ಗ್ರಾಮದಲ್ಲಿರುವುದು ಎಂದರೆ ಸರಿ. ನಾನು ನನ್ನ ಗಂಡನಿಗೆ ಸೇರಿದ ಮನೆಯನ್ನು ಕೂಡ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಮೇಲೆ ಹೇಳಿದ ಕಣವನ್ನು ಕೂಡ ಸೇರಿಸಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ವರದಕ್ಷಿಣೆ ಕೊಟ್ಟಿದ್ದೇವೆ, ವಿವಾಹದ ಖರ್ಚನ್ನು ನೋಡಿದ್ದೇವೆ ಹಾಗೂ 2 ಮಕ್ಕಳ ಹೆರಿಗೆ ಖರ್ಚನ್ನು ಕೂಡ ನೋಡಿದ್ದೇವೆ. ಆ ವಿಚಾರಗಳನ್ನು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

2 ನೇ ಪ್ರತಿವಾದಿಯ ವಿವಾಹ ಆದ ಮುಹೂರ್ತದಲ್ಲಿ ನನ್ನ ವಿವಾಹ ಆಗಿದೆ ಎಂದರೆ ಸರಿ. ಎರಡು ವಿವಾಹಗಳು ಒಂದೇ ಖರ್ಚಿನಲ್ಲಿ ಆಗಿದೆ ಎಂದರೆ ಸರಿಯಲ್ಲ. ನನ್ನ ಮದುವೆಯ ಪೂರ್ವದಲ್ಲಿ ನನ್ನ ಗಂಡನ ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು. ನಾನು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನನ್ನ ಗಂಡ ಬೇರೆ ಬೇರೆ ಕಡೆ ಸಾಲ ಮಾಡಿದ್ದನು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಗಂಡ ಕುಡಿಯುತ್ತಿದ್ದನು ಮತ್ತು ಇಸ್ಪೀಟ್ ಆಟ ಆಡುತ್ತಿದ್ದನು ಎಂದು ಬರೆಸಿದ್ದೇನೆ ಎಂದರೆ ಸರಿ. ಅದೇ ರೀತಿ ನನ್ನ ಗಂಡ ತನ್ನ ಜೀವಿತಾವಧಿಯಲ್ಲಿ ಬಹಳ ಜನರಿಂದ ಸಾಲ ಪಡೆದಿದ್ದನು ಎಂದು ಪ್ರಮಾಣ ಪತ್ರ ಮತ್ತು ವಾದಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಗಂಡನ ಸಾಲವನ್ನು ನಾನು ತೀರಿಸಿದ್ದೇನೆಂದು ವಾದ ಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆಂದರೆ ಸರಿಯಲ್ಲ. ನನ್ನ ಗಂಡನಿಗೆ ಸಾಲವನ್ನು ಯಾರು ಕೊಡಕೂಡದು ಎಂದು ಗ್ರಾಮದಲ್ಲಿ ಟಾಂ ಟಾಂ ಮಾಡಿಸಿದ್ದೇನೆ ಎಂದು ನನ್ನ ವಾದ ಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಗಂಡನ ದುಷ್ಚಟಗಳಿಗೆ ಪ್ರೇರಣೆ ಕೊಡುತ್ತಿದ್ದರು ಎಂದು ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಹೇಳಿ ಬರೆಸಿರುವುದಿಲ್ಲ.

ನನ್ನ ಮಕ್ಕಳಿಗೆ ಇರುವಷ್ಟೇ ಹಕ್ಕು ದಾವಾ ಆಸ್ತಿಗಳಲ್ಲಿ 2 ನೇ ಪ್ರತಿವಾದಿಗೆ ಇದೆ ಎಂದರೆ ಸರಿಯಲ್ಲ. ನನ್ನ ಗಂಡ, 1 ನೇ ಪ್ರತಿವಾದಿ ರೂ. 1 ಲಕ್ಷವನ್ನು 4 ನೇ

ಪ್ರತಿವಾದಿಯಿಂದ ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡು ಹಣ ಸಂದಾಯ ರಶೀದಿ ಯಾನೆ ಷರವನ್ನು ನಿಪಿ-7 ದಾಖಲೆಯ ಮೂಲ ಪ್ರತಿಯ ಹಿಂಭಾಗದಲ್ಲಿ ಅಂದರೆ ಪುಟ ಸಂ.6 ರಲ್ಲಿ ಬರೆದು ಸಹಿ ಮಾಡಿಕೊಟ್ಟಿರುವರು ಎಂದರೆ ಸುಳ್ಳು. ನಿಪಿ-7 ದಾಖಲೆಯ ಆಧಾರದ ಮೇಲೆ ನಾನು ಪರಿಹಾರವನ್ನು ಕೇಳಿರುತ್ತೇನೆ. ಸದರಿ ದಾಖಲೆಯ ಆಧಾರದ ಮೇಲೆ ನಾನು ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಿಃ30.07.2016 ರಂದು ಆರ್.ಟಿ.ಸಿ ಯನ್ನು ನೋಡಿರುತ್ತೇನೆ. ಸದರಿ ಆರ್.ಟಿ.ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ಮತ್ತು 2 ನೇ ದಾವಾ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನ್ನ ಗಂಡ ಜೀವಂತ ಇದ್ದಾಗ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ನನ್ನ ಗಂಡ ಮೃತಪಟ್ಟ ನಂತರ ದಾವಾ ಆಸ್ತಿಯನ್ನು ಕಬಳಿಸಲು ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಡಿದ ಅಮಲಿನಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದ ಕ್ರಯ ಪತ್ರಗಳನ್ನು ನನ್ನ ಗಂಡನಿಂದ ಬರೆಸಿಕೊಂಡಿರುವರು ಎಂದು ವಾದ ಪತ್ರ ಮತ್ತು ಮುಖ್ಯವಿಚಾರಣೆಯಲ್ಲಿ ಬರೆಸಿರುತ್ತೇನೆಂದರೆ ಸರಿ. ನನ್ನ ಗಂಡ ಕುಡಿದು ಕ್ರಯ ಪತ್ರವನ್ನು ಬರೆದುಕೊಟ್ಟಿರುವನು ಎಂದು ದಾಖಲೆ ಹಾಜರುಪಡಿಸಿರುವುದಿಲ್ಲ. ಅದೇ ರೀತಿ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.

4 ನೇ ಪ್ರತಿವಾದಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ನಾನು ತಕರಾರು ಹಾಕಿದ್ದೇನು ಎಂದರೆ ಸರಿ. 1 ನೇ ದಾವಾ ಆಸ್ತಿಯ ಪಹಣಿ 3 ನೇ ಪ್ರತಿವಾದಿಯ ಹೆಸರಿನಲ್ಲಿದ್ದು, 2 ನೇ ದಾವಾ ಆಸ್ತಿಯ ಪಹಣಿ ನನ್ನ ಗಂಡನ ಹೆಸರಿನಲ್ಲಿದೆ. 2 ನೇ ದಾವಾ ಆಸ್ತಿಯ ಪಹಣಿ 4 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದು ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**